**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 18 ಸಿಡಬ್ಲು : 39

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಜೆ.ಎಮ್.ಕರುಣಾಕರಶೆಟ್ಟಿ |
| ತಂದೆ ಹೆಸರು | : ಶ್ರೀ ಮಂಜಯ್ಯ ಶೆಟ್ಟಿ |
| ವಯಸ್ಸು | : 60 ವರ್ಷ |
| ಉದ್ಯೋಗ | : ನಿವೃತ್ತ ಎಸ್.ಪಿ. |
| ವಾಸ್ತವ್ಯ | : ಬೆಳಗಾವಿ |
| ದಿನಾಂಕ | : 12-05-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 02-02-2020 ರಿಂದ ದಿನಾಂಕಃ 18-05-2020 ರವರೆಗೆ ನಾನು DCRB ಘಟಕದಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಆ ಸಮಯದಲ್ಲಿ ನಾನು ಬೈಲಹೊಂಗಲ ಉಪವಿಭಾಗದಲ್ಲಿ ಪ್ರಭಾರ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಕಿತ್ತೂರು ಪೋಲಿಸ ಠಾಣೆ ಬೈಲಹೊಂಗಲ ಉಪ ವಿಭಾಗದ ವ್ಯಾಪ್ತಿಗೆ ಬರುತ್ತಿತ್ತು.

2. ದಿನಾಂಕಃ 03-03-2020 ರಂದು ನಾನು DCRB ಘಟಕದಲ್ಲಿ ಕರ್ತವ್ಯದಲ್ಲಿದ್ದಾಗ ಕಿತ್ತೂರು ಪೊಲೀಸ್ ಠಾಣೆಯ PSIರವರು ಈ ಪ್ರಕರಣ ದಾಖಲಾದ ಬಗ್ಗೆ ನನಗೆ ಮಾಹಿತಿಯನ್ನು ನೀಡಿದ್ದರು. ಅದೇ ದಿನ ಆರಕ್ಷಕ ಅಧೀಕ್ಷಕರು ಬೆಳಗಾವಿ, ಇವರು ಈ ಪ್ರಕರಣದ ತನಿಖೆಯನ್ನು ಮಾಡುವಂತೆ ನನಗೆ ಆದೇಶಿಸಿದ್ದರು. ತನಿಖಾ

ಆದೇಶವನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ನಿಪಿ:73 ಎಂದು ಗುರುತಿಸಲಾಯಿತು ಮತ್ತು ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ:73(ಎ) ಎಂದು ಗುರುತಿಸಲಾಯಿತು.

3. ದಿನಾಂಕ: 03-03-2020ರಂದು ಕಿತ್ತೂರು ಪೊಲೀಸ್ ಠಾಣೆಗೆ ಭೇಟಿ ನೀಡಿ ಈ ಪ್ರಕರಣದ ತನಿಖೆಯನ್ನು ಚಾಸಾ-38, ಪ್ರಾಸಾ-10 ಅವರಿಂದ ವಹಿಸಿಕೊಂಡಿದ್ದೇನೆ. ನಂತರ PSIರವರು ಮೃತನ ಶವವು ಧಾರವಾಡ ಆಸ್ಪತ್ರೆಯ ಶವಾಗಾರದಲ್ಲಿ ಇರುವುದಾಗಿ ತಿಳಿಸಿದ್ದು, ನಾನು PSIರವರಿಗೆ ಕೃತ್ಯ ನಡೆದ ಸ್ಥಳದ ಸಂರಕ್ಷಣೆಗಾಗಿ ಕ್ರಮ ಕೈಗೊಳ್ಳುವಂತೆ ಹಾಗೂ ಸಿಬ್ಬಂದಿಯವರನ್ನು ನೇಮಿಸುವಂತೆ ಹಾಗೂ ಆರೋಪಿತರನ್ನು ಪತ್ತೆ ಮಾಡುವಂತೆ PSIರವರಿಗೆ ಜ್ಞಾಪನ ಪತ್ರವನ್ನು ನೀಡಿ ನಾನು ಧಾರವಾಡ ಶವಾಗಾರಕ್ಕೆ ಭೇಟಿ ನೀಡಿದ್ದೇನೆ. PSIರವರಿಗೆ ನೀಡಿದ ಜ್ಞಾಪನ ಪತ್ರವನ್ನು ಈಗಾಗಲೇ ನಿಪಿ:59 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ:59(ಬಿ) ಎಂದು ಗುರುತಿಸಲಾಯಿತು.

4. ಮೃತನ ಹೆಂಡತಿ ಸಾವಿತ್ರಿಯವರು ಮೃತ ವ್ಯಕ್ತಿ ತನ್ನ ಗಂಡ ಎಂದು ಗುರುತಿಸಿರುತ್ತಾರೆ. ಶವಾಗಾರದಲ್ಲಿ ಶವ ಪಂಚನಾಮೆ ಮಾಡುವ ಸಲುವಾಗಿ ಸಾಕ್ಷಿದಾರರಾದ ಚಾಸಾ-2, ಪ್ರಾಸಾ -4 ರಾಜಶೇಖರ್ ಮಾದರ ಹಾಗೂ ಚಾಸಾ-3 ಫಕೀರಪ್ಪಾ ಮಾದರ ಇವರುಗಳ ಸಮಕ್ಷಮ ಶವ ಪಂಚನಾಮೆಯನ್ನು ಸಂಜೆ 5:20 ರಿಂದ 6:40ರವರೆಗೆ ಮಾಡಿದ್ದೇನೆ. ಈಗಾಗಲೇ ನಿಪಿ:4 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ:4(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ:2 ಮತ್ತು ನಿಪಿ:3 ರಂತೆ ಪೋಟೋಗಳನ್ನು ತೆಗೆಯಲಾಗಿದೆ ಎಂದು ಗುರುತಿಸಿದ್ದಾರೆ.

5. ನಂತರ ಮೃತನ ಸಾವಿಗೆ ಕಾರಣವನ್ನು ತಿಳಿದುಕೊಳ್ಳುವ ಸಲುವಾಗಿ ಫಾರಂ ನಂಬರ್

146-i ಮತ್ತು 146-ii ನ್ನು ವೈದ್ಯಾಧಿಕಾರಿಗಳು ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿಃ74 ಮತ್ತು 75 ಎಂದು, ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿಃ74 (ಎ) ಮತ್ತು 75(ಎ) ಎಂದು ಗುರುತಿಸಲಾಯಿತು. ಚಾಸಾ-31, ಫ್ರಾಸಾ 9 ಡಾ. ಸಮೀರ್ ಎಂಬುವವರು ಮರಣೋತ್ತರ ಪರೀಕ್ಷೆಯನ್ನು ಮಾಡಿದ್ದಾರೆ.

6. ಮರಣೋತ್ತರ ಪರೀಕ್ಷೆ ಆದ ನಂತರ ಶವವನ್ನು ಫಿರ್ಯಾದಿ ಸಾವಿತ್ರಿ ಅವರಿಗೆ ಹಸ್ತಾಂತರಿಸಲಾಯಿತು. ಆ ಬಗ್ಗೆ ಚಾಸಾ-26 ಆರ್.ಎಸ್.ತೇಲಿ ಅವರು ವರದಿಯನ್ನು ನೀಡಿದ್ದಾರೆ. ಶವ ಸಂದ ರಶೀದಿಯನ್ನು ನಿಪಿಃ76 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿಃ76(ಎ) ಎಂದು ಗುರುತಿಸಲಾಯಿತು. ದಿನಾಂಕಃ 03-03-2020ರಂದು ಶವ ಗುರುತಿಸಿದ ಬಗ್ಗೆ ಫಿರ್ಯಾದಿದಾರರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಮತ್ತು ಅದೇ ಸಮಯದಲ್ಲಿ ದೂರುದಾರನ ಅಣ್ಣ ಚಾಸಾ-8 ಆನಂದ್ ಫಕೀರಪ್ಪಾ ಹರಿಜನ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

7. ದಿನಾಂಕಃ 04-03-2020ರಂದು ಘಟನಾ ಸ್ಥಳದ ಪಂಚನಾಮೆಯನ್ನು ಮಾಡುವ ಸಲುವಾಗಿ ಸಾಕ್ಷಿದಾರರಾದ ಚಾಸಾ-4 , ಫ್ರಾಸಾ -5 ಮಡಿವಾಳ ಸ್ವಾಮಿ ಮತ್ತು ಚಾಸಾ-5 ವೀರಭದ್ರಪ್ಪಾ ಇವರುಗಳನ್ನು ಠಾಣೆಗೆ ಕರೆಯಿಸಿಕೊಂಡು, ಘಟನೆಯ ಬಗ್ಗೆ ತಿಳಿಸಿ, ಅವರ ಒಪ್ಪಿಗೆಯನ್ನು ಪಡೆದುಕೊಂಡು ನಂತರ ಘಟನಾ ಸ್ಥಳವಾದ ಬಸರಕೋಡ ಗ್ರಾಮದ ಆರೋಪಿತರ ಮನೆಯ ಹಿಂಭಾಗದಲ್ಲಿರುವ ಹಿತ್ತಲಿನಲ್ಲಿ ಕರೆದುಕೊಂಡು ಹೋಗಿದ್ದು, ಅಲ್ಲಿ ಫಿರ್ಯಾದಿಯ ಮೈದುನ ಚಾಸಾ-13 , ಫ್ರಾಸಾ -7 ಶ್ರೀಶೈಲ ದೊಡಮನಿ ಅವರು ಹಾಜರಿದ್ದು, ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 9:00 ಗಂಟೆಯಿಂದ 10:00 ಗಂಟೆಯವರೆಗೆ ಪಂಚನಾಮೆ ಮಾಡಿದ್ದೇನೆ. ಪಂಚನಾಮೆಯನ್ನು ನಿಪಿಃ 5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ5(ಸಿ) ಎಂದು

ಗುರುತಿಸಲಾಯಿತು. ಆ ಸಮಯದಲ್ಲಿ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು, ಬೂದು ಬಣ್ಣದ walkrooಎಂದು ಬರೆದಿದ್ದ 10 ನಂಬರಿನ ಒಂದು ಜೊತೆ ಚಪ್ಪಲಿಯನ್ನು ಸಾಕ್ಷಿದಾರರ ಸಮಕ್ಷಮ ಜಪ್ತು ಮಾಡಿಕೊಂಡಿರುತ್ತೇನೆ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 15-05-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

8. ಚಾಸಾ-13, ಪ್ರಾಸಾ -7ರವರು ಶ್ರೀಶೈಲ ದೊಡಮನಿ 1ನೇ ಆರೋಪಿಯ ಮನೆಯ ಒಳಗಡೆ ಕರೆದುಕೊಂಡು ಹೋಗಿ ನೆಲದ ಮೇಲೆ ಬಿದ್ದಿದ್ದ ಖಾರದ ಪುಡಿಯನ್ನು ತೋರಿಸಿ, ಅದನ್ನು ಮೃತ ಬಸವರಾಜ ಕಣ್ಣಿಗೆ ಆರೋಪಿತರು ಎರಚಿರಬಹುದೆಂದು ತೋರಿಸಿದನು. ಸ್ಥಳದಲ್ಲಿ ಬಿದ್ದಿದ್ದ ಮಣ್ಣು ಮಿಶ್ರಿತ ಕೆಂಪು ಬಣ್ಣದ ಖಾರದ ಪುಡಿ ಮತ್ತು ಸಾದಾ ಮಣ್ಣನ್ನು ಜಪ್ತು ಮಾಡಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ರಕ್ತ ಹತ್ತಿದ ಮಣ್ಣನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ-1 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಸಾದಾ ಮಣ್ಣನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ-2 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬೂದು ಬಣ್ಣದ ಒಂದು ಚಪ್ಪಲಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ-3 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ 1ನೇ ಆರೋಪಿಯ ಮನೆಯೊಳಗೆ ನೆಲದ ಮೇಲೆ ಬಿದ್ದಿದ್ದ ಮಣ್ಣು ಮಿಶ್ರಿತ ಕೆಂಪು ಬಣ್ಣದ ಖಾರದ ಪುಡಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ-16 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ನೆಲದ ಮೇಲೆ ಬಿದ್ದಿದ್ದ ಸಾದಾ ಮಣ್ಣನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ-25 ಎಂದು ಗುರುತಿಸಲಾಗಿದೆ. ಆ ರೀತಿ ವಸ್ತುಗಳನ್ನು ಜಪ್ತು ಮಾಡುವ ಸಂದರ್ಬದಲ್ಲಿ ಪೋಟೋಗಳನ್ನು ತೆಗೆಯಲಾಗಿದೆ. ಅವುಗಳನ್ನು ಈಗಾಗಲೆ ನಿಪಿ-6, ನಿಪಿ-7, ನಿಪಿ-8, ನಿಪಿ-9, ಮತ್ತು ನಿಪಿ-10 ಎಂದು ಗುರುತಿಲಾಗಿದೆ. ಸಾಕ್ಷಿ ಒಂದು ಪೋಟೋವನ್ನು ಗುರುತಿಸಿದ್ದು, ಕೃತ್ಯ ನಡೆದ ಸ್ಥಳದಲ್ಲಿ

ಒಂದು ಜೊತೆ ಚಪ್ಪಲಿ ಬಿದ್ದಿರುವುದನ್ನು ಗುರುತಿಸಿದ್ದಾರೆ. ಆ ಬಗ್ಗೆ ಒಂದು ಪೋಟೋವನ್ನು ಗುರುತಿಸಿದ್ದು, ಅದನ್ನು ನಿಪಿ–77 ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿದ್ದೇನೆ. ಕಚ್ಚಾ ನಕ್ಷೆಯನ್ನು ನಿಪಿಃ78 ಎಂದು, ಸಾಕ್ಷಿಯ ಸಹಿಯನ್ನು ನಿಪಿ–78(ಎ) ಎಂದು ಗುರುತಿಸಲಾಯಿತು.

9. ದಿಃ04.03.2020ರಿಂದ PSIರವರು ಈ ಪ್ರಕರಣದ ಆರೋಪಿತರನ್ನು ಪತ್ತೆ ಮಾಡಿಕೊಂಡು ಬಂದು ಠಾಣೆಯಲ್ಲಿ ಇರಿಸಿರುವುದಾಗಿ ನನಗೆ ಮಾಹಿತಿಯನ್ನು ನೀಡಿದರು. ನಾನು ಕೂಡಲೆ ಠಾಣೆಗೆ ಭೇಟಿ ನೀಡಿ ಆರೋಪಿತರಾದ 1ನೇ ಆರೋಪಿ ಗೋಪಾಲ ಪಾಗದ್, ಮಹಾಂತೇಶ ಪಾಗದ್ ಮತ್ತು ರೇಣುಕಾ ಗೋಪಾಲ್ ಪಾಗದ್ 3 ಜನರನ್ನು PSIರವರು ನನ್ನ ಮುಂದೆ ನಿಪಿ–60 ರ ವರದಿಯ ಪ್ರಕಾರ ಹಾಜರು ಮಾಡಿದ್ದರು. ವರದಿಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–60(ಬಿ) ಎಂದು ಗುರುತಿಸಲಾಯಿತು. 3 ಜನ ಆರೋಪಿತರನ್ನು ನಾನು ಪ್ರತ್ಯೇಕವಾಗಿ ವಿಚಾರಿಸಿದ್ದೇನೆ. 3 ಜನ ಆರೋಪಿತರು ತಪ್ಪನ್ನು ಒಪ್ಪಿಕೊಂಡಿದ್ದರಿಂದ 3 ಜನ ಆರೋಪಿತರ ಮೇಲೆ ದಸ್ತಗಿರಿ ನಿಯಮಾನುಸಾರ ದಸ್ತಗಿರಿ ಮಾಡಿದ್ದೇನೆ. ಆನಂತರ 3 ಜನ ಆರೋಪಿತರು ಸ್ವಇಚ್ಚಾ ಹೇಳಿಕೆಯನ್ನು ನೀಡಿದ್ದಾರೆ.

10. 1ನೇ ಆರೋಪಿ ಗೋಪಾಲ್ ಪಾಗದ್ ರವರು "ನಮ್ಮೊಂದಿಗೆ ಬಂದರೆ ನಾವು ಮೃತನಿಗೆ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ, ಮೃತನಿಗೆ ಹೊಡೆದ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ರಾಡ್, ಘಟನೆಯ ಕಾಲಕ್ಕೆ ಮೃತನ ರಕ್ತ ಸಿಡಿದ ನನ್ನ ಮೈ ಮೇಲಿನ ಬಟ್ಟೆಗಳನ್ನು ತೋರಿಸುವುದಲ್ಲದೆ, ಕೊಲೆ ವಿಷಯವಾಗಿ ನಾವು ಮಾತನಾಡಿಕೊಂಡ ನನ್ನ ಮೊಬೈಲ್ hand set ನನ್ನ ಕಡೆ ಇದ್ದು, ಅದನ್ನು ಹಾಜರು ಮಾಡುತ್ತೇನೆ."ಎಂದು

ಹೇಳಿಕೆ ನೀಡಿರುತ್ತಾರೆ. 1ನೇ ಆರೋಪಿಯ ಹೇಳಿಕೆ ಭಾಗವನ್ನು ನಿಪಿ-79 ಎಂದು ಗುರುತಿಸಲಾಯಿತು.

11. ಅದೇ ರೀತಿಯಾಗಿ 2ನೇ ಆರೋಪಿ ಮಹಾಂತೇಶ್ ಪಾಗದ್ ಇವರು "ನಮ್ಮೊಂದಿಗೆ ಬಂದರೆ ನಾವು ಮೃತನಿಗೆ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ, ಮೃತನಿಗೆ ಹೊಡೆದ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ರಾಡ್, ಘಟನೆಯ ಕಾಲಕ್ಕೆ ಮೃತನ ರಕ್ತ ಸಿಡಿದ ನನ್ನ ಮೈ ಮೇಲಿನ ಬಟ್ಟೆಗಳನ್ನು ತೋರಿಸುವುದಲ್ಲದೆ, ಕೊಲೆ ವಿಷಯವಾಗಿ ನಾವು ಮಾತನಾಡಿಕೊಂಡ ನನ್ನ ಮೊಬೈಲ್ hand set ನ್ನು ಕಡೆ ಇದ್ದು, ಅದನ್ನು ಹಾಜರು ಮಾಡುತ್ತೇನೆ."ಎಂದು ಹೇಳಿಕೆ ನೀಡಿರುತ್ತಾರೆ. 2ನೇ ಆರೋಪಿಯ ಹೇಳಿಕೆ ಭಾಗವನ್ನು ನಿಪಿ-80 ಎಂದು ಗುರುತಿಸಲಾಯಿತು.

12. ಅದೇ ರೀತಿಯಾಗಿ 3ನೇ ಆರೋಪಿ ರೇಣುಕಾ ಪಾಗದ್ ಅವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ "ನಮ್ಮೊಂದಿಗೆ ಬಂದರೆ ನಾವು ಬಸವರಾಜನಿಗೆ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ, ಅವನಿಗೆ ಹೊಡೆದ ಸ್ಥಳ ಹಾಗೂ ಬಸವರಾಜನಿಗೆ ಹೊಡೆಯಲು ಬಳಸಿದ ರಾಡ್, ಘಟನೆಯ ಕಾಲಕ್ಕೆ ಮೃತನ ರಕ್ತ ಸಿಡಿದ ನನ್ನ ಮೈ ಮೇಲಿನ ಬಟ್ಟೆಗಳನ್ನು ತೋರಿಸುವುದಲ್ಲದೆ, ಕೊಲೆ ವಿಷಯವಾಗಿ ನಾವು ಮಾತನಾಡಿಕೊಂಡ ನನ್ನ ಮೊಬೈಲ್ hand setಗಳು ಕಡೆ ಇದ್ದು, ಅವುಗಳನ್ನು ಹಾಜರು ಮಾಡುತ್ತೇನೆ." ಎಂದು ಹೇಳಿಕೆ ನೀಡಿರುತ್ತಾರೆ. 3ನೇ ಆರೋಪಿಯ ಹೇಳಿಕೆ ಭಾಗವನ್ನು ನಿಪಿ-81 ಎಂದು ಗುರುತಿಸಲಾಯಿತು.

13. 3 ಜನ ಆರೋಪಿತರು ಈ ರೀತಿಯಾಗಿ ಹೇಳಿಕೆ ನೀಡಿದ್ದರಿಂದ ನಾನು ಸಾಕ್ಷಿದಾರರಾದ ಚಾಸಾ-4 ಮಡಿವಾಳ ಸ್ವಾಮಿ ಮತ್ತು ಚಾಸಾ-5 ವೀರಭದ್ರಪ್ಪಾ

ಇವರುಗಳನ್ನು ಠಾಣೆಗೆ ಕರೆಯಿಸಿಕೊಂಡಿದ್ದು, 1ನೇ ಆರೋಪಿ ತನ್ನ 2 ಮೊಬೈಲ್ hand set ಮೊಬೈಲ್ ಗಳನ್ನು ಹಾಜರು ಮಾಡಿದ್ದನು. ಒಂದನೆಯದು ಕಪ್ಪು ಬಣ್ಣದ Jivi ಎಂದು ಬರೆದಿರುವ ಮೊಬೈಲ್ ಪೋನನ್ನು ಹಾಜರು ಮಾಡಿದ್ದು, ಅದರಲ್ಲಿ Idea ಕಂಪನಿಯ ಸಿಮ್ ಕಾರ್ಡ್ ಇದ್ದು, ಸಿಮ್ ಕಾರ್ಡ ನಂಬರ್ 91-8722580118 ಆಗಿರುತ್ತದೆ. ಅದನ್ನು ಸಾಕ್ಷಿದಾರರ ಸಮಕ್ಷಮ ಜಪ್ತು ಮಾಡಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಕಪ್ಪು ಬಣ್ಣದ ಮೊಬೈಲ್ ಅದರ ಹಿಂಭಾಗದಲ್ಲಿ Jivi ಎಂದು ಬರೆದಿದ್ದು, ಅದನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ.4 ಎಂದು ಗುರುತಿಸಲಾಗಿದೆ. ಮೊಬೈನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ಸಿಮ್ ಇರುವುದು ಕಂಡು ಬಂದಿರುತ್ತದೆ. 2ನೇ ಮೊಬೈಲ್ handset ಬಿಳಿ ಬಣ್ಣದ Triomax ಮೊಬೈಲನ್ನು ಹಾಜರು ಮಾಡಿದ್ದು, ಅದರಲ್ಲಿ Airtel ಕಂಪನಿಗೆ ಸೇರಿದ ಸಿಮ್ ನಂಬರ್ 9148479603 ಇರುತ್ತದೆ. ಅದನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು. ಮಾ.5 ಎಂದು ಗುರುತಿಸಲಾಗಿದೆ.

14. 2ನೇ ಆರೋಪಿ ಮಹಾಂತೇಶ್ ಪಾಗದ್ ಇವರು Vivo ಕಂಪನಿಗೆ ಸೇರಿದ silver ಬಣ್ಣದ ಒಂದು ಮೊಬೈಲನ್ನು ಹಾಜರುಪಡಿಸಿದ್ದು, ಅದರಲ್ಲಿ 2 ಸಿಮ್ ಕಾರ್ಡ್‌ಗಳಿದ್ದು, ಒಂದನೆಯದು Jio ಕಂಪನಿಯ 8310527767 ಆಗಿದ್ದು, ಇನ್ನೊಂದು Airtel ಕಂಪನಿಯ 9008915153 ಆಗಿರುತ್ತದೆ. ಮೊಬೈಲನ್ನು ಮತ್ತು ಸಿಮ್ ಕಾರ್ಡನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೆ ಮು.ಮಾ.6 ಎಂದು ಗುರುತಿಸಲಾಗಿದೆ,

15. 3ನೇ ಆರೋಪಿಯು 2 ಮೊಬೈಲ handset ಗಳನ್ನು ಹಾಜರು ಮಾಡಿದ್ದು, ಕಪ್ಪು ಬಣ್ಣದ Jio ಕಂಪನಿಗೆ ಸೇರಿದ ಸಣ್ಣ ಮೊಬೈಲ್ ಆಗಿದ್ದು, ಅದರಲ್ಲಿ 6363626813 ನಂಬರಿನ ಸಿಮ್ ಇರುತ್ತದೆ ಹಾಗೂ ಕಪ್ಪು ಬಣ್ಣದ ಕೆಂಪು ಪಟ್ಟಿಯಿರುವ carbon

ಕಂಪನಿಯ ಸಣ್ಣ ಮೊಬೈಲನ್ನು ಹಾಜರು ಮಾಡಿದ್ದು, ಅದರಲ್ಲಿ idea ಕಂಪನಿಯ 91872261141 ಸಿಮ್ ಇರುತ್ತದೆ. io ಕಂಪನಿಯ ಮೊಬೈಲನ್ನು ಈಗಾಗಲೆ ಮು.ಮಾ–7 ಎಂದು ಗುರುತಿಸಲಾಗಿದ್ದು, carbon ಕಂಪನಿಯ ಮೊಬೈಲನ್ನು ಮು.ಮಾ–28 ಎಂದು ಗುರುತಿಸಲಾಯಿತು. ಆ ಹಂತದಲ್ಲಿ ನಿಪಿ–12, ನಿಪಿ–13, ನಿಪಿ14, ನಿಪಿ–15, ನಿಪಿ–16 ರಂತೆ ಫೋಟೋಗಳನ್ನು ತೆಗೆಯಲಾಗಿದೆ.

16. ಪಂಚನಾಮೆಯ ನಂತರ ಆರೋಪಿತರು ತೋರಿಸಿ ಹಾಜರು ಮಾಡಿರುವ ವಸ್ತುಗಳನ್ನು ಜಪ್ತು ಮಾಡುವುದಿದೆ ಎಂದು ನಾನು ಸಾಕ್ಷಿದಾರಾರಿಗೆ ತಿಳಿಸಿದ್ದು, ಅವರು ಒಪ್ಪಿ ಕೊಂಡಿದ್ದು, 1ನೇ ಆರೋಪಿ ನನ್ನನ್ನು ಮತ್ತು ಸಾಕ್ಷಿದಾರರನ್ನು ತಾನು ವಾಸಿಸುವ ಸ್ಥಳವಾದ ಬಸರಕೋಡ ಗ್ರಾಮದ ಅವರ ಮನೆಗೆ ಕರೆದುಕೊಂಡು ಹೋಗಿ, ಮನೆಯ ಹಿತ್ತಲಿನ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ಕೊಲೆ ಮಾಡಲು ಸಂಚು ರೂಪಿಸಿದ್ದೆವು ಎಂದು ಹೇಳಿದ ಪ್ರಕಾರ ಸ್ಥಳದಲ್ಲಿ ಪೋಟೋ ತೆಗೆಯಲಾಗಿದೆ. ಅದನ್ನು ಈಗಾಗಲೆ ನಿಪಿ–20 ಮತ್ತು 21 ಎಂದು ಗುರುತಿಸಲಾಗಿದೆ. ಕೃತ್ಯ ನಡೆದ ಸಮಯದಲ್ಲಿ 1ನೇ ಆರೋಪಿ ಧರಿಸಿದ್ದ ಪುಲ್ ತೋಳಿನ ಶರ್ಟ್, ಕಪ್ಪು ಮತ್ತು ಬೂದು ಬಣ್ಣದ ಪ್ಯಾಂಟನ್ನು, ಕಬ್ಬಿಣದ ರಾಡನ್ನು ತೋರಿಸಿ ಹಾಜರು ಮಾಡಿದೆನು. ಆ ಸಮಯದಲ್ಲಿ ಅವುಗಳನ್ನು ನಾನು ಜಪ್ತು ಮಾಡಿದ್ದೇನೆ ಮತ್ತು ಸಮಯದಲ್ಲಿ ಪೋಟೊಗಳನ್ನ ತೆಗೆದಿದ್ದೇನೆ. ಅವುಗಳನ್ನು ಈಗಾಗಲೆ ನಿಪಿ–30, ನಿಪಿ–31, ನಿಪಿ–27 ಮತ್ತು ನಿಪಿ–23 ಎಂದು ಗುರುತಿಸಲಾಗಿದೆ. 1ನೇ ಆರೋಪಿಯು ಹಾಜರು ಮಾಡಿದ ಪುಲ್ ತೋಳಿನ ಶರ್ಟನ್ನು ಮು.ಮಾ –11 ಮತ್ತು ಕಪ್ಪು ಮತ್ತು ಬೂದು ಬಣ್ಣದ ಪ್ಯಾಂಟನ್ನು ಮು.ಮಾ –12 ಎಂದು ಗುರುತಿಸಲಾಯಿತು.

17. ನಂತರ 2ನೇ ಆರೋಪಿ ಸಹ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸಿದನು. ಅಂದರೆ 1ನೇ ಆರೋಪಿ ತೋರಿಸಿದ ಸ್ಥಳವನ್ನೆ 2ನೇ ಆರೋಪಿ

ತೋರಿಸಿದನು. 2ನೇ ಆರೋಪಿ ಕೃತ್ಯದ ಸಮಯದಲ್ಲಿ ಧರಿಸಿದ ಹಳದಿ ಮತ್ತು ಕಾಫಿ ಬಣ್ಣದ ಉದ್ದ ತೋಳಿನ ಶರ್ಟ್‌ನ್ನು ಮು.ಮಾ–13 ಹಾಗೂ ಬೂದು ಬಣ್ಣದ ಗೆರೆಗಳಿರುವ ಪ್ಯಾಂಟನ್ನು ಮು.ಮಾ–14 ಎಂದು ಗುರುತಿಸಲಾಗಿದೆ. 2ನೇ ಆರೋಪಿ ಒಂದು ಬಡಿಗೆಯನ್ನು ಸಹ ಹಾಜರು ಮಾಡಿದನು. ಅದನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ–9 ಎಂದು ಗುರುತಿಸಲಾಗಿದೆ.

18. 3ನೇ ಆರೋಪಿಯು ಕೃತ್ಯ ಎಸಗಲು ಸಂಚು ರೂಪಿಸಿದ ಸ್ಥಳ ಎಂದು 1 ಮತ್ತು 2ನೇ ಆರೋಪಿ ತೋರಿಸಿದ ಸ್ಥಳವನ್ನು ತೋರಿಸಿದರು. ನಂತರ ಕೃತ್ಯಕ್ಕೆ ಉಪಯೋಗಿಸಿದ ಕೆಂಪು ಬಣ್ಣದ ಖಾರದ ಪುಡಿಯನ್ನು ಒಂದು ಡಬ್ಬದಲ್ಲಿ ಇರಿಸಿದ್ದು, ಅದನ್ನು ತೋರಿಸಿದರು. ಡಬ್ಬದಲ್ಲಿ ಅರ್ಧದಷ್ಟು ಖಾರದ ಪುಡಿ ಇತ್ತು ಮತ್ತು ಅದರಿಂದ ಖಾರದ ಪುಡಿ ತೆಗೆದು ಬಸವರಾಜನ ಕಣ್ಣಿಗೆ ಎರಚಿದರೆಂದು ಹೇಳಿದರು ಮತ್ತು ಕೃತ್ಯ ನಡೆದ ಸಮಯದಲ್ಲಿ ಆಕೆ ಧರಿಸಿದ ಗುಲಾಬಿ ಬಣ್ಣದ ಸೀರೆಗೆ ಅಲ್ಲಲ್ಲಿ ರಕ್ತ ಹತ್ತಿದ ಸೀರೆಯನ್ನು, ಖಾರದ ಪುಡಿ ಇರುವ ಡಬ್ಬವನ್ನು , ಮೃತ ಬಸವರಾಜ ಉಪಯೋಗಿಸುತ್ತಿದ್ದನೆಂದು ಹೇಳಲಾಗುವ ನೀಲಿ ಬಣ್ಣದ infinix ಮೊಬೈಲ್ ಹ್ಯಾಂಡಸೆಟ್ ನ್ನು ಹಾಜರು ಮಾಡಿದ್ದು, ನಾನು ಅದನ್ನು ಜಪ್ತು ಮಾಡಿದ್ದೇನೆ. ನೀಲಿ ಬಣ್ಣದ ಮೊಬೈಲ ಹಿಂಬಾಗದಲ್ಲಿ ಪ್ಲಾಸ್ಟಿಕ್ ಕವರನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ–17 ಎಂದು ಗುರುತಿಸಲಾಗಿದೆ. ಸಾಕ್ಷಿ ಗುಲಾಬಿ ಹಾಗೂ ಬಿಳಿ ಬಣ್ಣದಿಂದ ಕೂಡಿದ, ಹಸಿರು ಬಣ್ಣದ ಎಲೆ ಚಿತ್ರಗಳಿರುವ ಸೀರೆಯನ್ನು ಗುರುತಿಸಿದ್ದು, ಅದನ್ನು ಈಗಾಗಲೆ ಮು.ಮಾ–18 ಎಂದು ಗುರುತಿಸಲಾಗಿದೆ. ಖಾರದ ಪುಡಿಯ ಡಬ್ಬವನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಈಗಾಗಲೆ ಮು.ಮಾ.–15 ಎಂದು ಗುರುತಿಸಲಾಗಿದೆ. ಜಪ್ತಾದ ಖಾರದ ಪುಡಿಯನ್ನು ರಾಸಾಯನಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. 3ನೇ ಆರೋಪಿಯು ಬಸವರಾಜನಿಗೆ ಬಡಿಯಲು ಉಪಯೋಗಿಸಿದ ಬಡಿಗೆಯೆಂದು ಭತ್ತದ ಬಣಿವೆಯಲ್ಲಿ

ಮುಚ್ಚಿಟ್ಟಿದ್ದ ಬಡಿಗೆಯನ್ನು ಹಾಜರು ಮಾಡಿದ್ದು, ಅದನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ಈಗಾಗಲೆ ಮು.ಮಾ.10 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿದ್ದು, ಅವುಗಳನ್ನು ಈಗಾಗಲೆ ನಿಪಿ–18 ರಿಂದ ನಿಪಿ–52 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಿಪಿ–17 ಪಂಚನಾಮೆಯನ್ನು ಮದ್ಯಾಹ್ನ 2.00 ರಿಂದ 4.00 ರವರೆಗೆ ಮಾಡಲಾಗಿದೆ. ಪಂಚನಾಮೆಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–17(ಡಿ) ಎಂದು ಗುರುತಿಸಲಾಯಿತು. ನಂತರ ಜಪ್ತಾದ ವಸ್ತುಗಳ ಬಗ್ಗೆ ಸ್ವತ್ತು ಪಟ್ಟಿಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ( ಮೂಲ ಸ್ವತ್ತು ಪಟ್ಟಿ ಕಡತದಲ್ಲಿ ಲಭ್ಯ ಇರುವುದಿಲ್ಲ.) 3 ಜನ ಆರೋಪಿತರನ್ನು ವೈದ್ಯಕೀಯ ತಪಾಸಣೆ ಮಾಡಲು ಕಿತ್ತೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ. ಪರೀಕ್ಷೆಯ ನಂತರ ರಿಮ್ಯಾಂಡಿ ಅರ್ಜಿ ತಯಾರಿಸಿ 3 ಜನ ಆರೋಪಿತರನ್ನು ಸೂಕ್ತ ಬೆಂಗಾವಲಿನಲ್ಲಿ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದು, ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ನಾನು ದಸ್ತಗಿರಿ ಮಾಡಿದ 3 ಜನ ಆರೋಪಿತರನ್ನು ಗುರುತಿಸುತ್ತೇನೆ ಎಂದು ಹೇಳಿ, ನ್ಯಾಯಾಲಯದಲ್ಲಿ ಹಾಜರಾಗಿದ್ದ 3 ಜನ ಆರೋಪಿತರನ್ನು ಗುರುತಿಸಿದ್ದಾರೆ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 08-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

19. ದಿನಾಂಕ 04-03-2020 ರಂದು ಚಾಸಾ-26 ರವರು ಮರಣೊತ್ತರ ಪರೀಕ್ಷೆ ಸಮಯದಲ್ಲಿ ಮೃತ ವ್ಯಕ್ತಿಯಿಂದ ವೈಧ್ಯರು ಸಂಗ್ರಹಿಸಿದಂತಹ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ ಮಾಡಿ ಅವುಗಳ ಲೇಬಲ ಅಂಟಿಸಿ ಸೀಲ ಮಾಡಿ ಕಳುಹಿಸಿ ಕೊಟ್ಟಿದ್ದರು. ಚಾಸಾ-26 ರವರು ವರದಿಯೊಂದಿಗೆ ಅವುಗಳನ್ನು ನನ್ನ ಮುಂದೆ ಹಾಜರು ಮಾಡಿದರು. ವರದಿಯನ್ನು ನಿಪಿ-82 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-82 [ಎ] ಎಂದು ಗುರುತಿಸಲಾಯಿತು. ನಾನು ಆ ವಸ್ತುಗಳ ಲೇಬಲ್ ನೋಡಿ ಅವುಗಳ ಹೆಸರುಗಳನ್ನು ನೋಡಿಕೊಂಡು ನಿಪಿ-53 ರಂತೆ ಸಾಕ್ಷಿದಾರಾದ ಮಂಜುನಾಥ ಮತ್ತು ಹಣಮಂತ ಇವರುಗಳ ಸಮಕ್ಷಮ ಸಂಜೆ 5.45 ರಿಂದ 7.00 ಗಂಟೆ ವರೆಗೆ ಪಂಚನಾಮಾ ಮಾಡಿ ಜಪ್ತು ಮಾಡಿಕೊಂಡಿದ್ದೇನೆ. ಪಂಚನಾಮಾ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-53[ಬಿ] ಎಂದು ಗುರುತಿಸಲಾಯಿತು.

20. ಈ ಪ್ರಕರಣದಲ್ಲಿ ಜಪ್ತಾದ ಎಲ್ಲಾ ವಸ್ತುಗಳ ಬಗ್ಗೆ ಠಾಣಾ ಸ್ವತ್ತು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿದ್ದೇನೆ.

21. ದಿನಾಂಕ 04-03-2020 ರಂದು ಸಾಕ್ಷಿದಾರರಾದ ಚಾಸಾ-1 ಫ್ರಾಸಾ-3 ಸಾವಿತ್ರಿ ದೊಡಮನಿ ಅವರ ಮುಂದುವರೆದ ಹೇಳಿಕೆಯನ್ನು, ಚಾಸಾ-8 ಆನಂದ ಹರಿಜನ, ಚಾಸಾ-19 ಫ್ರಾಸಾ-1 ರುದ್ರಪ್ಪ ದೊಡಮನಿ, ಚಾಸಾ-13 ಫ್ರಾಸಾ-7 ಶ್ರೀಶೈಲ

ದೊಡಮನಿ, ಚಾಸಾ–12 ಪ್ರಾಸಾ–2 ವಿಠಲ ದೊಡಮನಿ, ಚಾಸಾ–11 ಯಲ್ಲಪ್ಪ, ಚಾಸಾ–10 ನೀಲಗಂಗವ್ವಾ ಚಾಸಃ 14 ಮಂಜೂನಾಥ , ಚಾಸಾಃ20 ಶಿವಪ್ಪ , ಚಾಸಾಃ 21 ಯಲ್ಲಪ್ಪ , ಅವರ ಹೇಳಿಕೆಗಳನ್ನು, ಪಡೆದುಕೊಂಡಿದ್ದೇನೆ.

22. ದಿನಾಂಕಃ 04–03–2020 ರಂದು ಮೃತನ ಮರಣೋತ್ತರ ಪರೀಕ್ಷೆ ವರದಿ ನೀಡುವಂತೆ ಚಾಸಾಃ 31 ಡಾಕ್ಟರ ಸಮೀರ ವೈಧ್ಯಾಧಿಕಾರಿಗಳು ಜಿಲ್ಲಾ ಆಸ್ಪತ್ರೆ ಧಾರವಾಡ ರವರಿಗೆ ಮನವಿಯನ್ನು ಮಾಡಿದ್ದು ದಿನಾಂಕಃ 05–03–2020 ರಂದು ಮರಣೋತ್ತರ ವರದಿ ಪಡೆದುಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ– 56 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ 56 (ಬಿ) ಎಂದು ಗುರುತಿಸಲಾಯಿತು.

23. ದಿನಾಂಕಃ 05–03–2020 ರಂದು ಕೃತ್ಯ ನಡೆದ ಸ್ಥಳದ ಉತಾರೆ ನೀಡುವಂತೆ ಚಾಸಾಃ 32 ಗ್ರಾಮ ಪಂಚಾಯತ ಅಭಿವೃದ್ದಿ ಅಧಿಕಾರಿ ರವರಿಗೆ ಹಾಗೂ ಚಾಸಾಃ 33 ಲೋಕೋಪಯೋಗಿ ಇಲಾಖೆ ರವರಿಗೆ ಕೃತ ನಡೆದ ಸ್ಥಳದ ನಕ್ಷೆ ತಯಾರಿಸಿ ಕೊಡುವಂತೆ ಮನವಿಯನ್ನು ಮಾಡಿ, ದಿನಾಂಕಃ 08–03–2020 ರಂದು ಸ್ಥಳ ನಕ್ಷೆಯನ್ನು ಪತ್ರ ಮುಖೇನ ಚಾಸಾಃ 33 ರವರಿಂದ ಮನವಿ ಪತ್ರನ್ನು ಪಡೆದುಕೊಂಡಿದ್ದೇನೆ. ಅದನ್ನು ನಿಪಿ–83 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–83[ಎ] ಎಂದು ಗುರುತಿಸಲಾಯಿತು. ಚಾಸಾಃ 33 ರವರು ನೀಡಿದ ಪತ್ರವನ್ನು ನಿಪಿ–84 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–84[ಎ] ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿಪಿ–85 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–85 [ಎ] ಎಂದು ಗುರುತಿಸಲಾಯಿತು.

24. ಗ್ರಾಮ ಪಂಚಾಯತಿ ರವರು ನೀಡಿದ ಉತಾರೆಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ–86 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ–86 [ಎ] ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 09-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

25. ದಿನಾಂಕ 04-03-2020 ರಂದು ಚಾಸಾ-36 ಸಮುದಾಯ ಆರೋಗ್ಯ ಕೇಂದ್ರ ಕಿತ್ತೂರು ಇವರಿಗೆ ಮೃತ ಬಸವರಾಜ ಇವರು ಜೀವಂತ ಇದ್ದಾಗ ಪ್ರಥಮ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆಯನ್ನು ನೀಡುವಂತೆ ಮನವಿ ಮಾಡಿದ್ದೇನೆ. ಮನವಿಯನ್ನು ನಿಪಿ-87 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-87[ಎ] ಎಂದು ಗುರುತಿಸಲಾಯಿತು. ಆ ಮನವಿ ಪ್ರಕಾರ ದಿನಾಂಕ 14-05-2020 ರಂದು ಚಾಸಾ-36 ರವರು ವೈಧ್ಯಕೀಯ ದಾಖಲೆಗಳನ್ನು ನೀಡಿರುತ್ತಾರೆ. ಅದನ್ನು ಈಗಾಗಲೇ ನಿಪಿ-55 ಎಂದು ಗುರುತಿಲಾಗಿದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-55 [ಬಿ] ಎಂದು ಗುರುತಿಸಲಾಯಿತು.

26. ಅದೇ ದಿನ ದಿನಾಂಕ 04-03-2020 ರಂದು ಚಾಸಾ-35 ತಹಶೀಲ್ದಾರ ಕಿತ್ತೂರ ರವರಿಗೆ ಪ್ರಕರಣದ ದೂರುದಾರರು ಹಾಗೂ ಆರೋಪಿತರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಮನವಿ ಮಾಡಿದ್ದೇನೆ. ಮವಿಯನ್ನು ನಿಪಿ-88 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-88[ಎ] ಎಂದು ಗುರುತಿಸಲಾಯಿತು. ಅದರಂತೆ ದಿನಾಂಕ 30-04-2020 ರಂದು ಜಾತಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಅದರ ಪ್ರಕಾರ ದೂರುದಾರರು ಮಾದರ-ಪರಿಶಿಷ್ಟ ಜಾತಿಗೆ ಸೇರಿದ್ದು ಮೂರು ಜನ ಆರೋಪಿತರು ಮರಾಠಾ ಜಾತಿಗೆ ಸೇರಿರುತ್ತಾರೆ. ಜಾತಿ ಪ್ರಮಾಣ ಪತ್ರವನ್ನು ನಿಪಿ-89 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-89 [ಎ] ಎಂದು ಗುರುತಿಸಲಾಯಿತು.

27. ದಿನಾಂಕ 05-03-2020 ರಂದು ಸಾಕ್ಷಿದಾರರಾದ ಚಾಸಾ- 15 ಫಕೀರಪ್ಪಾ

ತಳವಾರ, ಚಾಸಾ–16 ಕಲ್ಲಪ್ಪ ದೇಸಾಯಿ, ಚಾಸಾ–17 ಮಡಿವಾಳ ನಾಯ್ಕರ, ಚಾಸಾ–18 ಹಸನಸಾಬ ಅಂಬಲಗಡಿ, ಚಾಸಾ–19 ಬಸವರಾಜ ಎಮ್ಮಿ ಹಾಗೂ ಚಾಸಾ–22 ಎಸ್ ಎಮ್ ಮದಲಿ ಸಿಪಿಸಿ 2821, ಚಾಸಾ–23 ಎಸ್ ಹೆಚ್ ಕುದರಿ, ಚಾಸಾ–24 ಶ್ರಿಮತಿ ಬಿ.ಎಸ್.ಸ್ವಾ ಮಿ, ಮಹಿಳಾ ಎ.ಎಸ್.ಐ ಇವರ ಹೇಳಿಕಗಳನ್ನು ಪಡೆದುಕೊಂಡಿದ್ದೇನೆ. ಇವರುಗಳ ಪೈಕಿ ಚಾಸಾ–15 ಫ್ರಾಸಾ–13 ರವರು ನಿಪಿ–65 ಮತ್ತು 66 ರಂತೆ, ಹೇಳಿಕೆಯನ್ನು ನೀಡಿದ್ದಾರೆ ಚಾಸಾ–16 ಫ್ರಾಸಾ–14 ರವರು ನಿಪಿ–67 ಮತ್ತು 68 ರಂತೆ, ಚಾಸಾ–17 ಫ್ರಾಸಾ–15 ರವರು ನಿಪಿ–69 ಮತ್ತು 70 ರಂತೆ, ಚಾಸಾ–18 ಫ್ರಾಸಾ–16 ರವರು ನಿಪಿ–71 ರಂತೆ, ಚಾಸಾ–19 ಫ್ರಾಸಾ–17 ರವರು ನಿಪಿ–72 ರಂತೆ ಹೇಳಿಕೆಗಳನ್ನು ನೀಡಿದ್ದಾರೆ.

28. ದಿನಾಂಕ 05–03–2020 ರಂದು ಚಾಸಾ–29 ನಾಗರಾಜ ಅವರು ಪಂಚನಾಮಾ ಕಾಲಕ್ಕೆ ಫೋಟೊ ತೆಗೆದ ಬಗ್ಗೆ ಹಾಗೂ ಸಾಕ್ಷಿದಾರರ ಹೇಳಿಕೆ ನೀಡುವ ಸಮಯದಲ್ಲಿ ವೀಡಿಯೊ ಗ್ರಾಫಿ ಮಾಡಿದ ಬಗ್ಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ಸ್ವೀಕರಿಸಿದ್ದೇನೆ. ಅದನ್ನು ನಿಪಿ–90 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–90[ಎ] ಎಂದು ಗುರುತಿಸಲಾಯಿತು.

29. ದಿನಾಂಕ 05–03–20220 ರಂದು 3 ಜನ ಆರೋಪಿತರ ಮತ್ತು ಬಸವರಾಜ ರವರ ಮೊಬೈಲ ನಂಬರಗಳ CDR ನೀಡುವಂತೆ ಮನವಿ ಮಾಡಿದ್ದೇನೆ. 1 ನೇ ಆರೋಪಿ ಮೊಬೈಲ ನಂ.6362988364, 2 ನೇ ಆರೋಪಿ ಮೊಬೈಲ ನಂ.9008915153, 3 ನೇ ಆರೋಪಿ ಮೊಬೈಲ ನಂ. 6363626813 ಮತ್ತು ಮೃತ ಬಸವರಾಜನ ಮೊಬೈಲ ನಂ.8550089549 ಹಾಗೂ 7483334100 ಗಳ CDR ಅನ್ನು ಹಾಜರು ಮಾಡಿದ್ದೇನೆ. ಈ ಬಗ್ಗೆ ಸರ್ವಿಸ Provider ಅವರಿಂದ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ

ಪ್ರಮಾಣ ಪತ್ರವನ್ನು ಸಲ್ಲಿಸದೆ ಇರುವುದರಿಂದ ಅದನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

30. ದಿನಾಂಕ 30-03-2020 ರಂದು ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳ ಪೈಕಿ ನಾಲ್ಕು ವಸ್ತುಗಳಾದ ಮಣ್ಣು ಮಿಶ್ರಿತ ಕೆಂಪು ಬಣ್ಣದ ಖಾರದ ಪುಡಿ , ಸಾದಾ ಮಣ್ಣು, ಕೆಂಪು ಬಣ್ಣದ ಖಾರದ ಪುಡಿ , ಕಣ್ಣಿನ ಸ್ವಾಬ್ ಇವುಗಳನ್ನು ರಾಸಾಯನಿಕ ಪ್ರಯೋಗಕ್ಕಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ ಕಚೇರಿ ಬೆಂಗಳೂರಿಗೆ ನನ್ನ ಸಿಬ್ಬಂದಿಯ ಮುಖಾಂತರ ಕಳುಹಿಸಿಕೊಟ್ಟಿದ್ದೇನೆ. ಆ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆದುಕೊಂಡಿದ್ದೇನೆ. ನಿಪಿ-91 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-91 [ಎ] ಎಂದು ಗುರುತಿಸಲಾಯಿತು.

31. ದಿನಾಂಕ 18-03-2020 ರಂದು ಮೃತ ಬಸವರಾಜ ಅವರ ಮರಣೋತ್ತರ ಪರೀಕ್ಷೆ ಸಮಯದಲ್ಲಿ ವೈದ್ಯರ ಸಂಗ್ರಹಿಸಿ ನೀಡಿದಂತಹ 4 ವಸ್ತುಗಳನ್ನು RFSL ಬೆಳಗಾವಿ ಕಚೇರಿ, Toxicology ವಿಭಾಗಕ್ಕೆ ಮತ್ತು 19 ವಸ್ತುಗಳನ್ನು Biology ವಿಭಾಗಕ್ಕೆ ಕಳುಹಿಸಿ ಕೊಟ್ಟು ಆ ಬಗ್ಗೆ ಸ್ವೀಕೃತಿ ಪತ್ರ ಪಡೆದುಕೊಂಡಿದ್ದೇನೆ. ಎರಡು ಸ್ವೀಕೃತಿ ಪತ್ರಗಳನ್ನು ಕ್ರಮವಾಗಿ ನಿಪಿ-92 ಮತ್ತು 93 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-92 [ಎ] ಮತ್ತು 93[ಎ] ಎಂದು ಗುರುತಿಸಲಾಯಿತು.

32. ದಿನಾಂಕ 01-05-2020 ರಂದು ನಾನು ಮೃತ ಬಸವರಾಜ ಅವರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ತಹಶೀಲ್ದಾರ ಕಿತ್ತೂರ ಅವರಿಗೆ ಮನವಿ ಮಾಡಿ ದಿನಾಂಕ 14-05-2020 ರಂದು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಅದನ್ನು ನಿಪಿ-94 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-94 [ಎ] ಎಂದು ಗುರುತಿಸಲಾಯಿತು.

33. ದಿನಾಂಕ 25-04-2020 ರಂದು ಚಾಸಾ-37 ರವರಿಗೆ ಶಾಖಾಧಿಕಾರಿಗಳು ಹೆಸ್ಕಾಂ

ಕಿತ್ತೂರು ಇವರಿಗೆ ಕೃತ್ಯ ನಡೆಯಿತು ಎಂದು ಹೇಳಲಾದ ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡುವಂತೆ ಮನವಿ ಮಾಡಿದೇನು. ಮನವಿಯನ್ನು ನಿಪಿ–95 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–95 [ಎ] ಎಂದು ಗುರುತಿಸಲಾಯಿತು. ದಿನಾಂಕ 14–05–2020 ರಂದು ಚಾಸಾ–37 ರವರಿಂದ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ–96 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ–96 [ಎ] ಎಂದು ಗುರುತಿಸಲಾಯಿತು.

34. ದಿನಾಂಕ 14–05–2020 ರಂದು ತನಿಖೆಯನ್ನು ಪೂರ್ಣಗೊಳಿಸಿ ಮೂರು ಜನ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.